## ಪ್ರಾರ್ಥನೆ

# ಶ್ರೀಕೃಷ್ಣಲಹರೀ ಸ್ತೋತ್ರಮ್ - ೨



**ಕದಾಚಿತ್ ಗೋಪೀನಾಂ ಹಸಿತಚಕಿತಂ ಸ್ನಿಗ್ಧನಯನಂ**
**ಸ್ಥಿತಂ ಗೋಪೀವೃಂದೇ ನಟಮಿವ ನಟಂತಂ ಸುಲಲಿತಮ್ ।**
**ಸುರಾಧೀಶೈಃ ಸರ್ವೈಃ ಸ್ತುತಪದಮಮುಂ ಶ್ರೀಹರಿಮಿತಿ**
**ಪ್ರಸೀದೇತ್ಯಾಕ್ರೋಶನ್ ನಿಮಿಷಮಿವ ನೇಷ್ಯಾಮಿ ದಿವಸಾನ್ ॥ ೪ ॥**

ಗೋಪಿಯರ ಮುಗುಳುನಗೆ ಸಂಭ್ರಮಗಳಿಗೆ ಕಾರಣನಾದ, ಅವರ ಕಣ್ಣುಗಳು ಸ್ನೇಹದಿಂದ ತುಂಬಿಕೊಳ್ಳುವಂತೆ ಮಾಡುವ, ಅವರ ನಡುವೆ ನಿಂತು, ಶ್ರೇಷ್ಠ ನಟನು ಸುಲಲಿತವಾಗಿ ನರ್ತಿಸುವಂತೆ ನರ್ತಿಸುತ್ತಿರುವ; ಎಲ್ಲಾ ದೇವಾದಿದೇವತೆಗಳಿಂದಲೂ ಸ್ತೋತ್ರ ಮಾಡಲ್ಪಟ್ಟ ಪಾದಾರವಿಂದಗಳುಳ್ಳ ಹರಿಯನ್ನು, 'ನನ್ನಲ್ಲಿ ಪ್ರಸನ್ನನಾಗು' ಎಂದು ಕೂಗಿಕೊಳ್ಳುತ್ತಾ ದಿವಸಗಳನ್ನು ನಿಮಿಷಗಳಂತೆ ಎಂದು ಕಳೆಯುವೆನು !

**ಕದಾಚಿತ್ ಕಾಳಿಂದ್ಯಾಃ ತಟತರುಕದಂಬೇ ಸ್ಥಿತಮಮುಂ**
**ಸ್ಮಯಂತಮ್ ಸಾಕೂತಂ ಹೃತವಸನಗೋಪೀಸ್ತನತಟಮ್ ।**
**ಅಹೋ ಶಕ್ರಾನಂದಾಂಬುಜವದನ ಗೋವರ್ಧನಧರ**
**ಪ್ರಸೀದೇತ್ಯಾಕ್ರೋಶನ್ ನಿಮಿಷಮಿವ ನೇಷ್ಯಾಮಿ ದಿವಸಾನ್ ॥ ೫ ॥**

ಯಮುನೆಯ ತೀರದ ಮರಗಳ ಸಮೂಹದ ನಡುವೆ ನಿಂತು ಗೋಪಿಯರ ಮೇಲ್ವಸ್ತ್ರವನ್ನು ಸೆಳೆದುಕೊಂಡು ಅರ್ಥಪೂರ್ಣವಾಗಿ ನಗುತ್ತಿರುವ ಕೃಷ್ಣನೇ! ದೇವೇಂದ್ರನಿಗೆ ಆನಂದವನ್ನುಂಟು ಮಾಡಿದ ಮುಖಕಮಲವುಳ್ಳವನೇ! ಗೋವರ್ಧನಧಾರಿಯೆ! 'ಪ್ರಸನ್ನನಾಗು' ಎಂದು ಕೂಗಿಕೊಳ್ಳುತ್ತಾ ದಿವಸಗಳನ್ನು ನಿಮಿಷಗಳಂತೆ ಎಂದು ಕಳೆಯುವೆನು !

**ಕದಾಚಿತ್ ಕಾಂತಾರೇ ವಿಜಯಸಖಮಿಷ್ಟಂ ನೃಪಸುತಂ**
**ವದಂತಂ ಪಾರ್ಥೇದಂ ನೃಪಸುತ ಸಖೇ ಬಂಧುರಿತಿ ಚ ।**
**ಭ್ರಮಂತಂ ವಿಶ್ರಾಂತಂ ಶ್ರಿತಮುರಸಿ ರಮ್ಯಂ ಹರಿಮಹೋ**
**ಪ್ರಸೀದೇತ್ಯಾಕ್ರೋಶನ್ ನಿಮಿಷಮಿವ ನೇಷ್ಯಾಮಿ ದಿವಸಾನ್ ॥ ೬ ॥**

ಸ್ನೇಹಿತನಾದ ರಾಜಕುಮಾರನಾದ ಅರ್ಜುನನಿಗೆ ಪ್ರಿಯನಾದ; 'ಪಾರ್ಥ, ನೃಪಸುತ, ಸಖಾ, ಬಂಧು' ಮುಂತಾದ ಸಂಬೋಧನೆಯೊಡನೆ ಮಾತನಾಡುತ್ತಾ ಅವನೊಡನೆ ಕಾಡಿನಲ್ಲಿ ಸುತ್ತಾಡಿದ, ಹೃದಯದಲ್ಲಿ ನೆಲೆಸಿರುವ ಸುಂದರನಾದ ಹರಿಯನ್ನು 'ನನ್ನಲ್ಲಿ ಪ್ರಸನ್ನನಾಗು' ಎಂದು ಕೂಗಿಕೊಳ್ಳುತ್ತಾ ದಿವಸಗಳನ್ನು ನಿಮಿಷಗಳಂತೆ ಎಂದು ಕಳೆಯುವೆನು !

## ಸೂಕ್ತಿಪ್ರಭ

**ಕ**ಲ್ಪನೆಯು ಎಲ್ಲ ಸೃಜನಶೀಲತೆಯ ಆರಂಭ. ನೀವು ಬಯಸಿದ್ದನ್ನು ನೀವು ಕಲ್ಪಿಸಿಕೊಳ್ಳಿ. ಕಲ್ಪಿಸಿಕೊಂಡಿದ್ದನ್ನು ನಿಮ್ಮ ಇಚ್ಛಾಶಕ್ತಿಯಾಗಿ ಮಾರ್ಪಡಿಸಿ. ಕೊನೆಯದಾಗಿ ನಿಮ್ಮ ಇಚ್ಛಾಶಕ್ತಿಯನ್ನು ನೀವು ಸೃಷ್ಟಿಯಾಗಿ ಬದಲಾಯಿಸಿ.

— ಜಾರ್ಜ್ ಬರ್ನಾರ್ಡ್ ಷಾ

**ಕ್ಷ**ಮೆಯು ಹಿಂದಿನ ಕಹಿ ಅನುಭವವನ್ನು ಅಳಿಸಿಹಾಕುವುದಿಲ್ಲ. ವಾಸಿಯಾದ ನೆನಪು ಅಳಿಸಿಹೋದ ನೆನಪಲ್ಲ. ಬದಲಾಗಿ, ಮರೆಯಲಾಗದ ಸಂಗತಿಯನ್ನು ಕ್ಷಮಿಸುವುದು ಅದನ್ನು ಹೊಸ ರೀತಿಯಲ್ಲಿ ನೆನೆಯಲು ದಾರಿ ಮಾಡಿಕೊಡುವುದು. ನಮ್ಮ ಭೂತಕಾಲದ ನೆನಪನ್ನು ಕ್ಷಮೆಯು ಭವಿಷ್ಯತ್ತಿನ ಹೊಸ ಭರವಸೆಯಾಗಿ ಮಾರ್ಪಡಿಸುವುದು.

— ಲೂಯಿಸ್ ಬಿ. ಸ್ಮೆಡ್ಸ್

**ತಿಲೇಷು ತೈಲಂ ದಧನೀವ ಸರ್ಪಿ-**
**ರಾಪಃ ಸ್ರೋತಃಸ್ವರಣೀಷು ಚಾಗ್ನಿಃ ।**
**ಏವಮಾತ್ಮಾಽಽತ್ಮನಿ ಗೃಹ್ಯತೇಽಸೌ**
**ಸತ್ಯೇನೈನಂ ತಪಸಾ ಯೋಽನುಪಶ್ಯತಿ ॥**

**ಎ**ಳ್ಳಿನಲ್ಲಿರುವ ಎಣ್ಣೆಯಂತೆ, ಮೊಸರಿನಲ್ಲಿರುವ ತುಪ್ಪದಂತೆ, ಒಣಗಿದ ನದೀತಳದಲ್ಲಿರುವ ನೀರಿನಂತೆ, ಅರಣಿಗಳಲ್ಲಿರುವ ಅಗ್ನಿಯಂತೆ ಯಾವನು ಆತ್ಮನನ್ನು ಸತ್ಯದಿಂದಲೂ ತಪಸ್ಸಿನಿಂದಲೂ ಪುನಃ ಪುನಃ ನೋಡುತ್ತಾನೋ ಅವನು ತನ್ನಲ್ಲಿರುವ ಆತ್ಮನನ್ನು ತಾನೇ ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

— ಶ್ವೇತಾಶ್ವತರೋಪನಿಷತ್, ೧.೧೫

**ಅ**ನುಕಂಪದ ಕಾರ್ಯ ಎಷ್ಟೇ ಸಣ್ಣ ಕಾರ್ಯವಾಗಿರಲಿ, ಅದೆಂದಿಗೂ ನಷ್ಟವಾಗದು. — ಈಸೋಪ